ಅ) ಉಪ ಖನಿಜಗಳ ಮೇಲೆ ರಾಜಧನವನ್ನು ಈ ಕೆಳಕಂಡಂತೆ ನಿಗಧಿಪಡಿಸಲಾಗಿದೆ.

		ರೂ.ಪೈ	
೧)	ಮರಳು	೧–೫೦	ಮೆ. ಟನ್ನಿಗೆ
೨)	ಇಟ್ಟಿಗೆ	೪–೦೦	ಸಾವಿರಕ್ಕೆ
೩)	ಹೆಂಚು	೬–೦೦	ಸಾವಿರಕ್ಕೆ
೪)	ಕಲ್ಲು ಜಲ್ಲಿ	೨–೫೦	ಮೆ.ಟನ್ನಿಗೆ
೫)	ಇಟ್ಟಿಗೆ ಮಣ್ಣು	೧–೨೫	ಮೆ.ಟನ್ನಿಗೆ

ಆದ ಪ್ರಯುಕ್ತ ಈ ಮೇಲಿನ ಸಲಕರಣೆಗಳ ಮೇಲೆ ಒಂದು ಲಾರಿ ಲೋಡಿಗೆ ೧೫–೦೦ ರೂ.ನಂತೆ ರಾಜಧನವನ್ನು ವಿಧಿಸುವುದು ಉದ್ಭವಿಸುವುದಿಲ್ಲ.

ಆ) ಹೌದು.

ಇ) ರಾಜಧನ ಪಾವತಿಯು ಶಾಸನ ಬದ್ಧವಾದುದು ಸರ್ಕಾರ ರಾಜಧನವನ್ನು ಕಟ್ಟುನಿಟ್ಟಾಗಿ ವಸೂಲು ಮಾಡಲು ನಿರ್ಧರಿಸಿದೆ.

ವಿದ್ಯುತ್ ಇಲಾಖೆಯಲ್ಲಿ ನಷ್ಟ ತಪ್ಪಿಸಲು ಕೈಗೊಂಡ ಕ್ರಮಗಳ ಬಗ್ಗೆ

೯೯ (೧೨೧) ಶ್ರೀ ಜ್ಞಾನದೇವ ಎನ್. ದೊಡ್ಡಮೇಟಿ (ರೋಣ) .—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ರಾಜ್ಯದಲ್ಲಿಯ ವಿದ್ಯುತ್ ಇಲಾಖೆಯಲ್ಲಿಯ ಸರ್ವ ರೀತಿಯ ನಷ್ಟವನ್ನು ತಪ್ಪಿಸಲು ಕೈಗೊಂಡ ಕ್ರಮಗಳೇನು ?

(ಆ) ಹಾಗಿದ್ದಲ್ಲಿ ವಿದ್ಯುತ್ ಪಡೆದುಕೊಂಡು ಆಮೇಲೆ ವಿಫಲವಾದ ಬಾವಿಗಳಿಗಾಗಿ ಬಳಸಿದ ಕಂಬ ಹಾಗೂ ತಂತಿಯ ಮರು ಉಪಯೋಗಕ್ಕೆ ಏನಾದರೂ ಪ್ರಯತ್ನಿಸಲಾಗುವುದೆ ?

(ಇ) ಹಾಗಿದ್ದಲ್ಲಿ, ಎಷ್ಟು ? ಹಾಗೂ ಎಷ್ಟು ಮಿಾಟರ್ ತಂತಿಯನ್ನು ಎಲ್ಲೆಲ್ಲಿ ತೆಗೆದಿರಿಸಲಾಗಿದೆ ?

ಶ್ರೀ ಜೆ. ಎಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

(ಅ) ಈ ಕೆಳಗೆ ಕಂಡ ಕಾರಣಗಳಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನಷ್ಟವನ್ನು ಅನುಭವಿಸುತ್ತಿದೆ.

(೧) ಶಾಖೋತ್ಪನ್ನ ವಿದ್ಯುತ್ ಉತ್ಪಾದನೆಯ ಪ್ರಮಾಣ ಹೆಚ್ಚಿದ್ದು ವೆಚ್ಚವು ಜಾಸ್ತಿಯಾಗಿದೆ.

(೨) ರಾಜ್ಯದಲ್ಲಿ ಮುಂಗಾರು ಮಳೆಯ ಅಭಾವದಿಂದ ವಿದ್ಯುತ್ ಉತ್ಪಾದನೆಯು ಸಾಕಷ್ಟು ಆಗದೇ ಇದ್ದುದರಿಂದ ವಿದ್ಯುತ್‌ನ್ನು ನೆರೆ ರಾಜ್ಯಗಳಿಂದ ಹೆಚ್ಚು ಬೆಲೆಗೆ ಅಮದುಮಾಡಿಕೊಳ್ಳಲಾಗುತ್ತಿದೆ.

(೩) ನೀರಾವರಿ ಪಂಪುಶೆಟ್ಟುಗಳಿಗೆ ಕೊಡುತ್ತಿರುವ ವಿದ್ಯುತ್ ಜಾಸ್ತಿಯಾಗುತ್ತಿರುವುದರಿಂದಸಧ್ಯಕ್ಕೆ ಒಂದು ದಿನಕ್ಕೆ ೮.೭ ಮಿಲಿಯನ್ನು ಯೂನಿಟಿನಷ್ಟು ವಿದ್ಯುತ್ ಇದಕ್ಕಾಗಿ ಖರ್ಚಾಗುತ್ತಿದೆ.

''ಟ್ಯಾರಿಫ್‌ನ'' ಬೆಲೆ ಈಗ ಒಂದು ಯೂನಿಟ್‌ಗೆ ೧೧.೫ ಪೈಸೆ ಆಗಿದೆ.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ತಗಲುವ ಬೆಲೆ ೧ ಯೂನಿಟ್‌ಗೆ ಸುಮಾರು ೧೧೦ ಪೈಸೆ.

ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ನಷ್ಟವನ್ನು ಕಡಿಮೆಮಾಡಲು ವಿದ್ಯುತ್ ದರಗಳನ್ನು ಇತ್ತೀಚೆಗೆ ಪರಿಷ್ಕರಿಸಲಾಯಿತು. ಜೊತೆಗೆ ವಿದ್ಯುತ್ ಪ್ರಸರಣಾ ಮತ್ತು ವಿತರಣಾ ನಷ್ಟಗಳನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಜಾಗೃತ ದಳವನ್ನು ಬಲಪಡಿಸಿ ವಿದ್ಯುತ್ ಕಳ್ಳತನವಾಗುವುದನ್ನು ಪತ್ತೆಹಚ್ಚಿ ಅವರಿಂದ ವಿದ್ಯುತ್ ಬಾಕಿಯನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

(ಆ) ವಿದ್ಯುತ್ ಪಡೆದ ನಂತರ ಭಾವಿ ವಿಫಲವಾದಲ್ಲಿ ಮತ್ತು ವಿದ್ಯುತ್ ಬಳಕೆ ಬೇಕಾಗಿಲ್ಲದಿದ್ದಾಗ ಗ್ರಾಹಕರು ಶಾಶ್ವತವಾಗಿ ವಿದ್ಯುತ್ ಸರಬರಾಜಿನ ನಿಲುಗಡೆಗಾಗಿ ಮನವಿ ಸಲ್ಲಿಸಿದಲ್ಲಿ ಮಂಡಳಿಗೆ ಬರಬೇಕಾದ ಹಣ ಪಡೆದು ವಿದ್ಯುತ್ ಪೂರೈಕೆ ನಿಲ್ಲಿಸಿ. ಆ ಸ್ಥಾವರಕ್ಕೆ ಹಾಕಿರುವ ಲೈನನ್ನು ತೆಗೆದು ಹಾಕಲಾಗುತ್ತದೆ. ಅದರಿಂದ ದೊರೆಯುವ ಕಂಬ, ವೈರು ವಗೈರೆ ಸಾಮಾನುಗಳನ್ನು ಉಗ್ರಾಣಕ್ಕೆ ಹಿಂತಿರುಗಿಸಿ, ಬೇರೆ ಕೆಲಸಕ್ಕೆ ಉಪಯೋಗಿಸಲಾಗುತ್ತದೆ.

ಅಲ್ಲದೆ ಯಾವುದಾದರೂ ಸ್ಥಾವರಕ್ಕೆ ೬ ತಿಂಗಳಿಗೆ ಮೀರದಂತೆ ವಿದ್ಯುತ್ ಸರಬರಾಜು ನಿಲ್ಲಿಸಲ್ಪಟ್ಟಿದ್ದರೆ. ಸಂಬಂಧಪಟ್ಟ ಗ್ರಾಹಕರಿಗೆ ಒಂದು ತಿಂಗಳ ಮುಂಗಡ ಸೂಚನೆ ನೀಡಿ ಲೈನನ್ನು ತೆಗೆದುಹಾಕಲಾಗುತ್ತದೆ.

(ಇ) ವಿವರವನ್ನು ಮಂಡಲಿಯು ಎಲ್ಲಾ ಭಾಗಗಳಿಂದಲೂ ಸಂಗ್ರಹಿಸಲಾಗುತ್ತಿದೆ.

ಕೈಗಾರಿಕೆಗಳಲ್ಲಿ ಮಾಡಿರುವ ಬಂಡವಾಳದ ಬಗ್ಗೆ

೧೦೦ (೨೦೪) ಶ್ರೀ ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

(ಅ) ರಾಜ್ಯದ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ (ಕೆ.ಎಸ್.ಐ.ಐ.ಡಿ.ಸಿ) ಸ್ಥಾಪಿತಗೊಂಡಾಗಿನಿಂದ ವಿವಿಧ ಕೈಗಾರಿಕಾ ಘಟಕಗಳಲ್ಲಿ ಹೂಡಿದ ಬಂಡವಾಳದ ಮೊತ್ತವೆಷ್ಟು ?

(ಆ) ಪ್ರತಿ ಕೈಗಾರಿಕಾ ಘಟಕದ ಹೆಸರು, ಹೂಡಿದ ಬಂಡವಾಳ ಪಡೆದ ಷೇರುಗಳ ಸಂಖ್ಯೆ ಹಾಗೂ ಪ್ರಸ್ತುತ ಈ ಷೇರುಗಳ ಮುಖ ಬೆಲೆ ಎಷ್ಟು (ಪ್ರತಿ ಘಟಕದ ಪ್ರತ್ಯೇಕ ವಿವರಗಳು ಒದಗಿಸುವುದು) ?

(ಇ) ನಿಗಮವು ಬಂಡವಾಳ ಹೂಡಿರುವ ಘಟಕಗಳಲ್ಲಿ ಎಷ್ಟು ಉದ್ದಿಮೆಗಳು ಉತ್ಪಾದನೆ ನಿಲ್ಲಿಸಿವೆ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

(ಅ) ರಾಜ್ಯದ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ (ಕೆ.ಎಸ್.ಐ.ಐ.ಡಿ.ಸಿ.) ಸ್ಥಾಪನೆಗೊಂಡಾಗಿನಿಂದ ೩೧-೭-೮೭ರ ವರೆಗೆ ೧೭೧ ಘಟಕಗಳಿಗೆ ರೂ. ೨೬೨೨.೯೩ ಲಕ್ಷ ಬಂಡವಾಳ ಹೂಡಿದೆ ಮತ್ತು ರೂ. ೨೦೨೭.೫೧ ಲಕ್ಷಗಳು ಬಾಕಿ ಉಳಿದಿದೆ.

(ಆ) ಪ್ರತಿ ಘಟಕದಲ್ಲಿ ಹೂಡಿರುವ ಬಂಡವಾಳ, ಪಡೆದ ಷೇರು ಮುಂತಾದ ವಿವರಗಳನ್ನೊಳಗೊಂಡ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

(ಇ) ನಿಗಮವು ಬಂಡವಾಳ ಹೂಡಿರುವ ಘಟಕಗಳಲ್ಲಿ ೮ ಉದ್ದಿಮೆಗಳು ಉತ್ಪಾದನೆಯನ್ನು ನಿಲ್ಲಿಸಿವೆ.